# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 396 |
| ಸದಸ್ಯರ ಹೆಸರು | : | ಶ್ರೀ.ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.12.2022 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ; | ಹೌದು.<br><br>2022-23 ನೇ ಸಾಲಿನ ಆಯವ್ಯಯದಲ್ಲಿ 100 ಹೊಸ ಪಶುಚಿಕಿತ್ಸಾ ಕೇಂದ್ರಗಳನ್ನು ಹಂತ ಹಂತವಾಗಿ ಪ್ರಾರಂಭಿಸುವುದಾಗಿ ಘೋಷಿಸಲಾಗಿದೆ. |
| ಆ) | ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಹೊಸ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಹೌದು. |
| ಇ) | ಹಾಗಿದ್ದಲ್ಲಿ, ಯಾವ ಗ್ರಾಮದಲ್ಲಿ ಪಶುಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗುವು ದು; (ವಿವರ ನೀಡುವುದು) | ರಾಜ್ಯದಲ್ಲಿ ಅವಶ್ಯಕತೆಗನುಗುಣವಾಗಿ ಮೊದಲ ಹಂತದಲ್ಲಿ ಹೊಸದಾಗಿ 20 ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಸರ್ಕಾರಿ ಅದೇಶ ಸಂಖ್ಯೆ: ಪಸಂಮೀ ಇ-77 ಪಸಸೇ 2022 ಬೆಂಗಳೂರು ದಿ:17.05.2022 ರಂದು ಆದೇಶ ಹೊರಡಿಸಲಾಗಿದೆ.<br><br>ಸದರಿ ಆದೇಶದನ್ವಯ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ತಾಲ್ಲೂಕಿನ ಚೋರಡಿ, ಶಿಕಾರಿಪುರ ತಾಲ್ಲೂಕಿನ ಹರಗವಳ್ಳಿ ಗ್ರಾಮಗಳಲ್ಲಿ ಹಾಗೂ ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಗೋವಿನಕೋವಿ ಗ್ರಾಮದಲ್ಲಿ ನೂತನ ಪಶುಚಿಕಿತ್ಸಾಲಯ ಪ್ರಾರಂಭಿಸಲಾಗಿದೆ. |

| | | |
|---|---|---|
| ಈ) | ಪಶುಚಿಕಿತ್ಸಾಲಯಗಳನ್ನು ಮಂಜೂರು ಮಾಡಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು | ರಾಷ್ಟ್ರೀಯ ಕೃಷಿ ಆಯೋಗದ ಮಾರ್ಗಸೂಚಿಯಂತೆ ಪ್ರತಿ 5000 ಜಾನುವಾರು ಘಟಕಗಳಿಗೆ 01 ಪಶುವೈದ್ಯಕೀಯ ಸಂಸ್ಥೆ ಇರಬೇಕಾಗಿರುತ್ತದೆ. ನೂತನ ಪಶುಚಿಕಿತ್ಸಾಲಯ ತೆರೆಯಲು ವಿಧಿಸುವ 10 ಅಂಶಗಳ ಮಾನದಂಡಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

**ಸಂ: ಪಸಂಮೀ ಇ-183 ಪಸಸೇ 2022**

**(ಪ್ರಭು.ಬಿ.ಚವ್ಹಾಣ್)**
**ಪಶುಸಂಗೋಪನೆ ಸಚಿವರು**

## ಅನುಬಂಧ-1

### ನೂತನ ಪಶುಚಿಕಿತ್ಸಾಲಯ ತೆರೆಯಲು ವಿಧಿಸುವ 10 ಅಂಶಗಳ ಮಾನದಂಡ ಪಟ್ಟಿ

| ಕ್ರ.ಸಂ | 10 ಅಂಶಗಳು |
|---|---|
| 1 | ಗ್ರಾಮಕ್ಕೆ ಅತಿ ಹತ್ತಿರವಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಅಥವಾ ಪಶು ಚಿಕಿತ್ಸಾಲಯ ಇರುವ ಊರು ಮತ್ತು ದೂರ. |
| 2 | ಗ್ರಾಮದಿಂದ 8-10 ಕಿ.ಮೀ. ವ್ಯಾಸದಲ್ಲಿ ಬರುವ ಗ್ರಾಮಗಳ ಸಂಖ್ಯೆ. |
| 3 | 8-10 .ಮೀ. ವ್ಯಾಸದಲ್ಲಿ ಬರುವ ಗ್ರಾಮಗಳ ಹೆಸರು ಹಾಗೂ ಗ್ರಾಮಗಳಲ್ಲಿರುವ ಜಾನುವಾರುಗಳ ಸಂಖ್ಯೆ. |
| 4 | ಸಂಬಂಧಪಟ್ಟ ತಾಲ್ಲೂಕಿನಲ್ಲಿರುವ ಒಟ್ಟು ಪಶು ಚಿಕಿತ್ಸಾಲಯಗಳ ಮತ್ತು ಹಳ್ಳಿಗಳ ಸಂಖ್ಯೆ ಹಾಗೂ ತಾಲ್ಲೂಕಿನ ಜಾನುವಾರುಗಳ ಸಂಖ್ಯೆ. |
| 5 | ಗ್ರಾಮದಲ್ಲಿ ಅತ್ಯವಶ್ಯಕವಾಗಿರುವ ಸೌಕರ್ಯಗಳ ಬಗ್ಗೆ ಮಾಹಿತಿ.<br>ಅ) ಸಾರ್ವಜನಿಕ ಆಸ್ಪತ್ರೆ. |
| | ಆ) ಸಾರಿಗೆ ಸೌಕರ್ಯ. |
| | ಇ) ಅಂಚೆ ಕಚೇರಿ. |
| | ಈ) ಶಾಲೆ ಮತ್ತು ಕಾಲೇಜಿನ ಸೌಕರ್ಯಗಳು ಈ ಗ್ರಾಮದಲ್ಲಿಲ್ಲದಿದ್ದರೆ ಗ್ರಾಮದಿಂದ ಎಷ್ಟು ದೂರದಲ್ಲಿ ಈ ಅನುಕೂಲತೆಗಳು ದೊರೆಯುತ್ತವೆ. |
| 6 | ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದ ಕಟ್ಟಡವನ್ನು ನಿಗದಿತ ಮಾದರಿಯಲ್ಲಿ ಕಟ್ಟಿಸಿ ಇಲಾಖೆಗೆ ಒಪ್ಪಿಸಿಕೊಡುವ ದಾನಿಗಳು ಇರುವರೇ? ಅಥವಾ ಗ್ರಾಮ ಪಂಚಾಯಿತಿಯವರೇ ಕಟ್ಟಿಸುತ್ತಾರೆಯೇ? |
| 7 | ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದ ಸಿಬ್ಬಂದಿಯವರಿಗೆ ಬೇಕಾಗುವ ವಸತಿ ಗೃಹಗಳನ್ನು ಕಟ್ಟಿಸುವ ಬಗ್ಗೆ ಪ್ರಮಾಣ ಪತ್ರ. |
| 8 | ಪಶು ಚಿಕಿತ್ಸಾ ಕೇಂದ್ರ ಪ್ರಾರಂಭ ಮಾಡುವುದಕ್ಕೆ ಕನಿಷ್ಠ ಒಂದು ಎಕರೆ ನಿವೇಶನ, ಊರಿನ ಹೊರಗೆ ಸರಿಯಾದ ಜಾಗದಲ್ಲಿ ಕೊಡುವ ಬಗ್ಗೆ ಹಾಗೂ ರೂ.2500-00 ಗಳನ್ನು ವಂತಿಗೆಯಾಗಿ ಅನಾವರ್ತಕ ವೆಚ್ಚವಾಗಿ ಜಿಲ್ಲಾ ಪಂಚಾಯಿತಿಗೆ ಕಟ್ಟುವ ಬಗ್ಗೆ ಸಂಬಂಧಪಟ್ಟವರ ಒಪ್ಪಿಗೆ ಪ್ರಮಾಣ ಪತ್ರ. |
| 9 | ಪ್ರತಿ ವರ್ಷ ಬರುವ ಆವರ್ತಕ ವೆಚ್ಚವನ್ನು ಕಟ್ಟುವ ಬಗ್ಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಂದ ಪ್ರಮಾಣ ಪತ್ರ. |
| 10 | ಆಸ್ಪತ್ರೆಗೆ ಪ್ರತಿನಿತ್ಯ ಅವಶ್ಯಕವಾಗಿ ಬೇಕಾಗಿರುವ ನೀರಿನ ವ್ಯವಸ್ಥೆ ಮಾಡಲು ಆಸ್ಪತ್ರೆ ಆವರಣದಲ್ಲಿ ಒಂದು ಬೋರ್ ವೆಲ್ ಹಾಕಿಸಿಕೊಡುವ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಪ್ರಮಾಣ ಪತ್ರ. |

ನಿರ್ದೇಶಕರು